**ದಿ:13.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲು:-**ಪ್ರತಿವಾದಿ ಪರ ಶ್ರೀ**.K.M.B.,** ವಕೀಲರಿಂದ:-

ನಾನು ಮತ್ತು ನನ್ನ ಸಹೋದರ ಸಿದ್ದಪ್ಪ ಈಗಲೂ ಅನ್ಯೋನ್ಯವಾಗಿರುತ್ತೇವೆ ಎಂದರೆ ಸರಿ. ನನ್ನ ಸಹೋದರ ಸಿದ್ದಪ್ಪ ರವರಿಗೆ ನಮ್ಮ ಕುಟುಂಬದ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಸಹೋದರ ಸಿದ್ದಪ್ಪರವರು ದಿದ್ದಿಗಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಯಾವುದೇ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಒಂದು ಜಮೀನು ನಂತರ ಉರ್ಲಕಟ್ಟೆ ಗ್ರಾಮದ ಜಮೀನುಗಳು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದ ಹೊಲದ ಜಮೀನುದಾರರಿಗೆ ದಾವಾ ಆಸ್ತಿ ವ್ಯವಾಹಾರಗಳ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ಅದೇ ರೀತಿ ಉರ್ಲಕಟ್ಟೆ ಗ್ರಾಮಸ್ಥರಿಗೂ ಸಹ ದಾವಾ ಆಸ್ತಿ ವ್ಯವಾಹಾರಗಳ ಬಗ್ಗೆ

ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ತಿಳಿಸಿರುವ ಹಾಗೇ ಪ್ರತಿವಾದಿಗಳು ದಾವಾ ಆಸ್ತಿಗೆ ಬಂದು ಗಲಾಟೆ ಮಾಡಿರುತ್ತಾರೆ ಈ ಬಗ್ಗೆ ನಾನು ಊರಿನಲ್ಲಿ ಪಂಚಾಯಿತಿ ಮಾಡಿರುತ್ತೇನೆ ಎಂದು ತಿಳಿಸಿರುವ ಹಾಗೆ ಯಾವ ದಿನದಂದು ಪಂಚಾಯಿತಿ ನಡೆಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದರಿ ಪಂಚಾಯಿತಿಯಲ್ಲಿ ನಮ್ಮ ಊರಿನವರು ಇರುತ್ತಾರೆ ಅವರ ಹೆಸರುಗಳು ಪ್ರಕಾಶ್ ತಂದೆ ಹನುಮಂತಪ್ಪ, ಗೌಡ್ರ ಹನುಮಂತಪ್ಪ ತಂದೆ ಮುರಿಗೆಪ್ಪ ಇರುತ್ತಾರೆ. ಹಾಗೂ ಅವರೊಂದಿಗೆ ಬಹಳ ಜನ ಇದ್ದರು. ಸದರಿ ಪಂಚಾಯಿತಿಯಲ್ಲಿ ಪ್ರತಿವಾದಿ ನಂ:1 ರವರು ದಿದ್ದಿಗಿ ಗ್ರಾಮದವರಲ್ಲ, ಪತ್ರದಲ್ಲಿ ಪ್ರತಿವಾದಿ ನಂ:1 ರವರ ಹೆಸರು ಇರುವುದಿಲ್ಲ, ನಮ್ಮ ತಂದೆಯ ಹೆಸರು ಕಾಟ್ ಹಾಕಿ ಬರೆದಿರುವ ವ್ಯಕ್ತಿ ಯಾರು ಎಂದು ವಿಚಾರಣೆಯಾಗಿರುತ್ತದೆ, ಪ್ರತಿವಾದಿ ನಂ:1 ರವರು ತಾವು ಕಾಟು ಹಾಕಿ ಬರೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಾನು ಮತ್ತು ನನ್ನ ತಂದೆ ಚನ್ನಬಸಪ್ಪ ರವರು 1958 ರಿಂದ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುತ್ತೇವೆ ಎಂದ ಮೇಲೆ ಪ್ರತಿವಾದಿಗಳು ತಾವು ಇಷ್ಟು ದಿನಗಳ ಕಾಲ ಏನು ಮಾಡುತ್ತಿದ್ದೀರೀ ಎಂದು ವಿಚಾರಣೆಯಾಗಿರುತ್ತದೆ. ರಿಜಿಸ್ಟರ್ ಪತ್ರದಲ್ಲಿ ಕಾಟು ಹಾಕಿದ ಜಾಗದಲ್ಲಿ ಸಹಿ ಮಾಡಿರುವುದಿಲ್ಲ ಎಂದು ವಿಚಾರಣೆಯಾಗಿರುತ್ತದೆ. ದಾವಾ ಆಸ್ತಿಯ ನಾಲ್ಕು ದಿಕ್ಕಿಗಳ ಜಮೀನುಗಳ ರಿಜಿಸ್ಟರ್ ಪತ್ರದಲ್ಲಿ ಪ್ರತಿವಾದಿಗಳ ಹೆಸರು ಇರುವುದಿಲ್ಲ ಎಂದು ವಿಚಾರಿಸಿರುತ್ತಾರೆ. ಪ್ರತಿವಾದಿ ನಂ:1 ರವರಿಗೆ ದಾವಾ ಆಸ್ತಿ ಸೇರಿರುವುದಿಲ್ಲ, ಪ್ರತಿವಾದಿ ನಂ:2 ರವರಿಗೆ ದಾನ ಮಾಡಿರುವುದು ತಪ್ಪು ಇರುತ್ತದೆ ಎಂದು ವಿಚಾರಣೆಯಾಗಿರುತ್ತದೆ. ಸದರಿ ವಿಚಾರಣೆಯನ್ನು ಮೇಲೆ ತಿಳಿಸಿದ ಪಂಚಾಯಿತಿದಾರರಾದ ಪ್ರಕಾಶ್ ಮತ್ತು ಬಸವರಾಜಪ್ಪ ರವರು ವಿಚಾರಿಸಿರುತ್ತಾರೆ. ಪಂಚಾಯಿತಿಯಲ್ಲಿ ನಮ್ಮ ಬಳಿ ಇದ್ದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ದಾಖಲೆಗಳನ್ನು ಪರಿಶೀಲನೆ ಮಾಡಲು ಪಂಚಾಯಿತಿ ಸೇರಿಸಿರುತ್ತೇನೆ. ಸದರಿ ಪಂಚಾಯಿತಿಯಲ್ಲಿ ಪ್ರತಿವಾದಿ ನಂ:1 ಮತ್ತು ಪಲ್ಲಾಗಟ್ಟೆ ಗ್ರಾಮದರು ಬಂದಿರುತ್ತಾರೆ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಪಂಚಾಯಿತಿಯಲ್ಲಿ ನಮಗೆ ಸೇರಿದ ರವೆನ್ಯೂ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಗಳು ಯಾವುದೇ ದಾಖಲೆಗಳನ್ನು ಸೃಷ್ಟಿ ಮಾಡಿರುವುದಿಲ್ಲ ನಾನೇ ಸುಳ್ಳು ವ್ಯಾಜ್ಯ ಕಾರಣ

ಸೃಷ್ಟಿಸಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ:1 ರವರು ಈ ಹಿಂದೆ ದಾವಾ ಆಸ್ತಿಯ ಮಾಲೀಕರು ಇದ್ದು, ಅವರ ಹೆಂಡತಿಯಾದ ಪ್ರತಿವಾದಿ ನಂ:2 ರವರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಪ್ರತಿವಾದಿ ನಂ:2 ರವರಿಗೆ ದಾವಾ ಆಸ್ತಿಯ ಮ್ಯೂಟೇಷನ್ ಮತ್ತು ರವೆನ್ಯೂ ದಾಖಲೆಗಳು ಬಂದಿರುತ್ತವೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಪ್ರತಿವಾದಿ ನಂ:1 ರವರು ಪ್ರತಿವಾದಿ ನಂ:2 ರವರಿಗೆ ಬೋಗಸ್ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ:1 ರವರು ಖರೀದಿ ಮಾಡಿದ ಕಾಲದಿಂದ ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ದು ಉಳುಮೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ ನನ್ನ ವಾದಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳಲ್ಲಿ ನನ್ನ ಮತ್ತು ನನ್ನ ತಂದೆಯ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ನಿಪಿ31 ಬೆಳೆ ದೃಡೀಕರಣ ಪತ್ರವನ್ನು ಒಬ್ಬರೇ ವ್ಯಕ್ತಿ ಬರೆದಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಯಾರು ಬರೆದರು ಅವರನ್ನು ವಿಚಾರಿಸಬೇಕು ಎಂದು ಹೇಳುತ್ತಾರೆ. ನಿಪಿ31 ದಾಖಲೆಯನ್ನು ನನ್ನ ಮಗ ಮರುಳಸಿದ್ದಪ್ಪರವರು ಬರೆಸಿಕೊಂಡು ಬಂದಿರುತ್ತಾರೆ. ನಾನು ಸದರಿ ನಿಪಿ31 ದಾಖಲೆಯನ್ನು ದಾವೆಗಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಂದ ದಾವಾ ಆಸ್ತಿಯನ್ನು ಪಡೆಯಲು ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ

ಸಿವಿಲ್ ನ್ಯಾಯಾಧೀಶರು, ಜಗಳೂರು